# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 385/2020

**ಪಿರ್ಯಾದುದಾರರು** ಃ ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿಗಳು** ಃ

**1.** **ಗೋಪಾಲಯ್ಯ**
**ಬಿನ್ ಮಾರಣ್ಣ**
**ವಯಸ್ಸು 55 ವರ್ಷ,**

**2.** **ಅರುಣ್ ಕುಮಾರ್**
**ಬಿನ್ ಗೋಪಾಲಯ್ಯ**
**ವಯಸ್ಸು 22 ವರ್ಷ**

**3.** **ರಮೇಶ**
**ಬಿನ್ ಮಾರಣ್ಣ**
**ವಯಸ್ಸು 40 ವರ್ಷ,**

**4.** **ಪ್ರಕಾಶ್**
**ಬಿನ್ ಮಾರಣ್ಣ**
**ವಯಸ್ಸು 38 ವರ್ಷ,**
**ಆರೋಪಿ-1 ರಿಂದ 4 ರವರ**
**ವಾಸಃ ಮಾಯಸಂದ್ರ,**
**ತಾವರೆಕೆರೆ ಹೋಬಳಿ**
**ಬೆಂಗಳೂರು ಸೌತ್ ತಾಲ್ಲೂಕು**
**ಬೆಂಗಳೂರು ಸಿ.ಟಿ**

## <u>ದೋಷಾರೋಪಣೆ</u>

ಶ್ರೀಮತಿ. ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

1. **ಗೋಪಾಲಯ್ಯ**
2. **ಅರುಣ್ ಕುಮಾರ್**
3. **ರಮೇಶ**
4. **ಪ್ರಕಾಶ್ ಎಂಬ ಆರೋಪಿಗಳಾದ ನೀವು**

ದಿನಾಂಕ 05-07-2018 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಬೆಂಗಳೂರು ದಕ್ಷಿಣ ತಾಲ್ಲೂಕು ದೊಡ್ಡೇರಿ ಗ್ರಾಮದ ಬಳಿ ಪಟ್ಟಣ್ಣನವರ ಜಮೀನಿನ ಮುಂಭಾಗ ಉದ್ದಂಡನಹಳ್ಳಿ

ದೊಡ್ಡೇರಿ ಹೋಗುವ ರಸ್ತೆಯಲ್ಲಿ ಆರೋಪಿಗಳಾದ ಇವುಗಳು ಸಮಾನ ಉದ್ದೇಶದಿಂದ ಚಾಸಾ-4 ಮತ್ತು ಚಾಸಾ-8 ರವರ ಮೇಲೆ ಕಲ್ಲು ಬಂಡೆಯ ಬಗ್ಗೆ ಇದ್ದ ತಕರಾರಿಗೆ ಕಲ್ಲು ಬಂಡೆ ಕೆಲಸ ಮಾಡಿಸಲು ಹೋಗುತ್ತಿದ್ದಾಗ, ಚಾಸಾ-1 ರವರು ಚಾಸಾ-4 ರವರಿಗೆ ಫೋನ್ ಮಾಡಿ ವಿಚಾರ ತಿಳಿಸಿದ್ದು ಆಗ ಚಾಸಾ-5 ರವರು ಕೆಲಸ ಮಾಡಲು ಬಿಡಬೇಡಿ ತಡೆಯಿರಿ ಎಂದು ಹೇಳಿದ್ದು, ಚಾಸಾ-1, 2, 3 ಮತ್ತು ಚಾಸಾ-7 ರವರು ಆರೋಪಿಗಳಿಗೆ ಕೆಲಸ ಮಾಡದಂತೆ ಹೇಳುತ್ತಿದ್ದಾಗ, 1 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1 ರವರ ಬಲಗೈಗೆ , 2 ನೇ ಆರೋಪಿಯ ರಾಡಿನಿಂದ ಚಾಸಾ-1 ರವರ ಬೆನ್ನಿಗೆ, 3 ನೇ ಆರೋಪಿಯು ಕಲ್ಲಿನಿಂದ ಚಾಸಾ-2 ರವರ ಬಲಗೈಗೆ 4 ನೇ ಆರೋಪಿಯು ಅದೇ ಕಲ್ಲಿನಿಂದ ಚಾಸಾ-2 ರವರ ಕಾಲಿಗೆ ಹೊಡೆದು, ಸಾಮಾನ್ಯ ಸ್ವರೂಪದ ಗಾಯಗೊಳಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-324 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಸಮಾನ ಉದ್ದೇಶದಿಂದ ಚಾಸಾ-1, 2, 3 ಮತ್ತು ಚಾಸಾ-7 ರವರುಗಳಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಮತ್ತು ಚಾಸಾ-4 ರವರಿಗೆ ಆರೋಪಿ-1 ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಕರೆಸುತ್ತೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-504 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು, ಸಮಾನ ಉದ್ದೇಶದಿಂದ ಚಾಸಾ-1, 2, 3 ಮತ್ತು ಚಾಸಾ-7 ರವರಿಗೆ ಇಲ್ಲಿ ಕೆಲಸ ಮಾಡಿದರೆ ಒಂದು ಗತಿ ಕಾಣಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿದ್ದು ಮತ್ತು ಆರೋಪಿ-2 ರವರು ಕೆಎ-02- ಜೆಜೆ-3489 ಮೋಟಾರ್ ಸೈಕಲ್?ಸ್ಟಾರ್ಟ್ ಮಾಡಿ ಚಾಸಾ-1 ರವರ ಬಳಿ ಚಾಲನೆ

ಮಾಡಿಕೊಂಡು ಹೋದಾಗ ಅವರು ಪಕ್ಕಕ್ಕೆ ಬಿದಿದ್ದು ತಪ್ಪಿಸಿಕೊಂಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-506 ಸಹವಾಚಕ 34 ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ-1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?**

**ಆರೋಪಿ-1 ರವರ ಉತ್ತರ ಃ**
**ಆರೋಪಿ-2 ರವರ ಉತ್ತರ ಃ**
**ಆರೋಪಿ-3 ರವರ ಉತ್ತರ ಃ**
**ಆರೋಪಿ-4 ರವರ ಉತ್ತರ ಃ**

**ಪ್ರಶ್ನೆ-2 ಃ ನೀವು ನಿಮ್ಮ ತಪ್ಪನ್ನು ಒಪ್ಪುಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಛಿಸುವಿವರೋ ?**

**ಆರೋಪಿ-1 ರವರ ಉತ್ತರ ಃ**
**ಆರೋಪಿ-2 ರವರ ಉತ್ತರ ಃ**
**ಆರೋಪಿ-3 ರವರ ಉತ್ತರ ಃ**
**ಆರೋಪಿ-4 ರವರ ಉತ್ತರ ಃ**

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 21 ನೇ ಜೂನ್ 2023 ರಂದು ಸಹಿಯನ್ನು ಮಾಡಿರುತ್ತೇನೆ.)**

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**

**ಆರೋಪಿಗಳ ಸಹಿಃ**